ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-1

ಸಂಖ್ಯೆ: ಸಿ8(7)ಖಾ.ಶಿ.ಅ ಸುತ್ತೋಲೆ:01:2005-06 ದಿನಾಂಕ:17-09-2005

## ಸುತ್ತೋಲೆ

ವಿಷಯ:- ಖಾಸಗಿ ಶಾಲೆಗಳಿಗೆ ಮಾನ್ಯತೆ ನೀಡುವ ಬಗ್ಗೆ

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ ಸಿ8(8)ಖಾ.ಶಿ.ಅ ಆ.ವಿ:2001-02

ದಿನಾಂಕ: 17-08-2002 ಮತ್ತು 12-12-2002

** ** **

ರಾಜ್ಯದಲ್ಲಿನ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮಾನ್ಯತೆ ನೀಡುವ ಬಗ್ಗೆ ಈ ಕಛೇರಿಯ ಸುತ್ತೋಲೆ ದಿನಾಂಕ: 17-08-2002ರಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ.

ಅನುದಾನ ಸಂಹಿತೆಯಡಿಯಲ್ಲಿ ಸರ್ಕಾರದಿಂದ/ಇಲಾಖೆಯಿಂದ ಅನುಮತಿ ಪಡೆದು, ಮಾನ್ಯತೆ ಪಡೆದ ಶಾಲೆಗಳು ದಿನಾಂಕ:01-06-95ರಿಂದ ಶಿಕ್ಷಣ ಕಾಯ್ದೆ ಜಾರಿಗೆ ಬಂದಿರುವುದರಿಂದ ಕರ್ನಾಟಕ ಶಿಕ್ಷಣ ಕಾಯ್ದೆಸೆಕ್ಷನ್-38 ರಡಿಯಲ್ಲಿ ಮಾನ್ಯತೆಯನ್ನು ಪಡೆಯಬೇಕಾಗುತ್ತದೆ.

ದಿನಾಂಕ: 01-06-95ರ ಪೂರ್ವದಲ್ಲಿ ಅಂದರೆ, ಶಿಕ್ಷಣ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಅನುದಾನ ಸಂಹಿತೆ ನಿಯಮದಡಿಯಲ್ಲಿ ಖಾಯಂ ಮಾನ್ಯತೆ ಪಡೆದಿದ್ದರೂ ಸಹ ದಿನಾಂಕ: 04-11-99ರಲ್ಲಿ ಹೊರಡಿಸಲಾದ ಮಾನ್ಯತೆ ನಿಯಮ(4)ರಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಂಡು ಅಂತಹ ಶಾಲೆಗಳಿಗೆ "ಮುಂದಿನ ಆದೇಶವನ್ನು ಹೊರಡಿಸುವವರೆಗೂ" ಮಾನ್ಯತೆಯನ್ನು ಸಂಬಂಧಿಸಿದ ಪ್ರಾಧಿಕಾರಿಗಳು ನೀಡುವುದು ಎಂದು ಉಲ್ಲೇಖದ ದಿನಾಂಕ: 17-08-2002ರಲ್ಲಿ ತಿಳಿಸಲಾಗಿತ್ತು. ನಂತರ ಈ ಪದಕ್ಕೆ ದಿನಾಂಕ: 12-12-2002ರಲ್ಲಿ ತಿದ್ದುಪಡಿ ನೀಡಿ "ಮುಂದಿನ ಆದೇಶವನ್ನು ಹೊರಡಿಸುವವರೆಗೂ" ಎಂಬುದಕ್ಕೆ ಬದಲಾಗಿ " ಮಾನ್ಯತೆ ನೀಡಿದೆ" ಎಂದು ತಿದ್ದುಪಡಿ ಮಾಡಲಾಗಿದೆ.

ದಿನಾಂಕ: 04-11-99ರ ಮಾನ್ಯತೆ ನಿಯಮ(4)ರಲ್ಲಿ ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಮತ್ತು ವಿಧಿಸಿರುವ ಷರತ್ತುಗಳನ್ನು ಪೂರೈಸದೇ ಇರುವ ಶಾಲೆಗಳಿಗೆ "ಮೂರು ವರ್ಷಗಳ ಅವಧಿಗೆ" ಮಾನ್ಯತೆಯನ್ನು ನೀಡುವುದು, ಇಂತಹ ಶಾಲೆಗಳಿಗೆ ಮಾನ್ಯತೆ ನಿಯಮ(7)ರಡಿಯಲ್ಲಿ ನಮೂನೆ-3ರಲ್ಲಿ ಮಾನ್ಯತೆಯನ್ನು ನೀಡುವುದು.

ಈ ರೀತಿ ಉಲ್ಲೇಖದಲ್ಲಿನ ಸುತ್ತೋಲೆಯಲ್ಲಿ ವಿವರವಾದ ಸೂಚನೆಗಳನ್ನು ನೀಡಿದ್ದಾಗಿಯೂ ಮಾನ್ಯತೆಯನ್ನು ಪ್ರತಿ ವರ್ಷವು ಪಡೆದುಕೊಳ್ಳುವುದೆಂದು, ಒತ್ತಾಯವನ್ನು ತರುತ್ತಿರುವುದು. ಈ ಕಛೇರಿಯ ಗಮನಕ್ಕೆ ಬಂದಿದೆ.

ಆದ್ದರಿಂದ ಮೇಲಿನ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಖಾಸಗಿ ಶಾಲೆಗಳಿಗೆ ಮಾನ್ಯತೆಯನ್ನು ನೀಡುವಲ್ಲಿ ನಿಯಮಗಳಡಿಯಲ್ಲಿ ಸರಳೀಕೃತವಾಗಿ ಕ್ರಮ ವಹಿಸಲು ಸಂಬಂಧಿಸಿದ ಪ್ರಾಧಿಕಾರಿಗಳಿಗೆ(ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರುಗಳಿಗೆ)ಈ ಮೂಲಕ ಸೂಚಿಸಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದೆಂದೂ ಸಹ ತಿಳಿಸಲಾಗಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ವಿಭಾಗ
2. ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.